ಆರ್.ವಿ. ದೇಶಪಾಂಡೆ
ಉನ್ನತ ಶಿಕ್ಷಣ ಮತ್ತು
ಪ್ರವಾಸೋದ್ಯಮ ಸಚಿವರು

ಕೊಠಡಿ ಸಂಖ್ಯೆ: 314-314ಎ
ವಿಧಾನಸೌಧ
ಬೆಂಗಳೂರು - 560 001
ದೂರವಾಣಿ: 22250637
22033448

ಸಂ. ಉಶಿಪ್ರಸ/ /2013

ದಿನಾಂಕ :.........................

# ಪತ್ರಿಕಾ ಪ್ರಕಟಣೆ

## ಡಿಪ್ಲೊಮಾ ಕ್ಯಾರಿಓವರ್: ನ್ಯಾಯಾಲಯದ ತೀರ್ಪು ಪಾಲಿಸಲು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ ಮನವಿ

ಡಿಪ್ಲೊಮಾ ವ್ಯಾಸಂಗದಲ್ಲಿ ಈಗಿರುವ ಕ್ಯಾರಿಓವರ್ ನಿಯಮವನ್ನು ಪಾಲಿಸುವುದು ಕಡ್ಡಾಯ ಮತ್ತು ನಾಲ್ಕಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣರಾದವರಿಗೆ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ನೀಡಿಕೆ ಸಾದುವಲ್ಲ ಎಂದು ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪು ಮತ್ತು ರಾಜ್ಯದ ಅಡ್ವೋಕೇಟ್ ಜನರಲ್‌ರವರು ಅಭಿಪ್ರಾಯ ನೀಡಿರುವುದರಿಂದ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಸಂಘಟಣೆಗಳು ಯಾವುದೇ ರೀತಿಯ ಹೋರಾಟಕ್ಕೆ ಮುಂದಾಗದೇ ಶಾಂತಿ ಮತ್ತು ಸಮಾಧಾನದಿಂದ ವರ್ತಿಸಿ, ಶಿಕ್ಷಣ ಕ್ಷೇತ್ರದ ಉನ್ನತಿಗೆ ಸಹಕರಿಸಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಸಂಘಟಣೆಗಳು ಕ್ಯಾರಿಓವರ್‌ನಲ್ಲಿ ತಮ್ಮ ಬೇಡಿಕೆಗಳನ್ನು ನನಗೆ ಈಗಾಗಲೇ ವ್ಯಕ್ತಪಡಿಸಿದಾಗ ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ರಾಜ್ಯದ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಕೇಳಲಾಯಿತು. ಆದರೆ ನ್ಯಾಯಾಲಯದ ತೀರ್ಪನ್ನೇ ಪಾಲಿಸುವುದು ಕಡ್ಡಾಯ ಎಂಬ ಅಭಿಪ್ರಾಯ ವ್ಯಕ್ತವಾಗಿರುವುದರಿಂದ ಇದಕ್ಕೆ ವ್ಯತಿರಿಕ್ತವಾದ ಯಾವುದೇ ಕ್ರಮ ಯಾರೇ ಕೈಗೊಂಡರೂ ಸಹ ಅದು ನ್ಯಾಯಾಲಯ ನಿಂದನೆ ಆಗುತ್ತದೆ. ಇದನ್ನು ಅವಗಾಹಿಸಿ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಮತ್ತು ಹೆಚ್ಚಿನ ಅಂಕಗಳಿಸುವ ಬಗ್ಗೆ ಗಮನಹರಿಸಬೇಕೆಂದು ಹಾಗೂ ಅವರ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಕೋರುತ್ತೇನೆ.

ಈ ನಿಯಮಾವಳಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರವೇಶ ಪೂರ್ವದಲ್ಲಿಯೇ ಹಾಗೂ ಸೆಮಿಸ್ಟರ್ ತರಗತಿಗಳು ಪ್ರಾರಂಭಗೊಳ್ಳುವ ಮುನ್ನವೇ ಇಲಾಖೆಯು ತನ್ನ ವೆಬ್‌ಸೈಟ್‌ನಲ್ಲಿ ಸುತ್ತೋಲೆಯ ಮೂಲಕ ಪ್ರಕಟಿಸಿ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಮನವರಿಕೆ ಮಾಡಿಕೊಡಲಾಗಿದೆ. ಕ್ಯಾರಿಓವರ್ ವಿಷಯವನ್ನು ವಿಧಾನಸಭೆಯ ಕಲಾಪದಲ್ಲಿ ಕೆಲವು ಸದಸ್ಯರು ಪ್ರಸ್ತಾಪಿಸಿದ್ದರು. ಆಗ ನಾನು ವಿದ್ಯಾರ್ಥಿಗಳ ಬಗ್ಗೆ ಕಳಕಳಿ ವ್ಯಕ್ತಪಡಿಸಿ ಕಾನೂನಿನ ಚೌಕಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಯಾವ ಸಹಾಯ ನೀಡುವುದು ಸಾಧ್ಯವೋ ಅವೆಲ್ಲವುಗಳನ್ನೂ ನೀಡಲಾಗುವುದು ಹಾಗೂ ಅಡ್ವೋಕೇಟ್ ಜನರಲ್ ಅವರಲ್ಲಿ ಈ ಬಗ್ಗೆ ಅಭಿಪ್ರಾಯ ಕೇಳಲಾಗುವುದು ಎಂದು ನಾನು ಭರವಸೆ ನೀಡಿರುತ್ತೇನೆ. ಆ ಪ್ರಕಾರ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯವನ್ನು ಪಡೆಯಲಾಗಿದೆ.

### ಕ್ಯಾರಿ ಓವರ್ ನಿಯಮಾವಳಿಗಳ ಬಗ್ಗೆ ಹೆಚ್ಚಿನ ಮಾಹಿತಿ

2009-10ನೇ ಸಾಲಿನಿಂದ ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸುಗಳಿಗೆ, ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಲಾಗಿದೆ. ಪರಿಷ್ಕೃತ ಪಠ್ಯಕ್ರಮಗಳ ನಿಯಮಾವಳಿಗೆ ಸಂಬಂಧಿಸಿದಂತೆ, ದಿನಾಂಕ 01-08-2009 ರ ಸರ್ಕಾರದ ಆದೇಶದಲ್ಲಿರುವ" Regulations and Guidelines for Diploma courses as per the curriculum-C-09/10" ಪ್ರಕಾರ ಡಿಪ್ಲೊಮಾ ಪ್ರವೇಶ ಮತ್ತು ಪರೀಕ್ಷಾ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಈ ನಿಯಮಾವಳಿಯ ಪ್ರಕಾರ ಹಿಂದಿನ ವರ್ಷಗಳ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. 2011-12 ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸುವಂತೆ, ಸರ್ಕಾರವು ಹೊಸ ಪಠ್ಯಕ್ರಮಗಳನ್ನು ಅಳವಡಿಸಿರುವ ಹಿನ್ನಲೆಯಲ್ಲಿ, ಕ್ಯಾರಿ ಓವರ್ ನಿಯಮಾವಳಿಗಳನ್ನು ಸಡಿಲಿಸಿ, ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ಹತ್ತು ಅಥವಾ ಹತ್ತಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ

ಆರ್.ವಿ. ದೇಶಪಾಂಡೆ
ಉನ್ನತ ಶಿಕ್ಷಣ ಮತ್ತು
ಪ್ರವಾಸೋದ್ಯಮ ಸಚಿವರು

ಕೊಠಡಿ ಸಂಖ್ಯೆ: 314–314ಎ
ವಿಧಾನಸೌಧ
ಬೆಂಗಳೂರು – 560 001
ದೂರವಾಣಿ: 22250637
22033448

ಸಂ. ಉಶಿಪ್ರಸ/ /2013 ದಿನಾಂಕ :.........................

ವರ್ಷದ ತರಗತಿಗಳಿಗೆ ಪ್ರವೇಶ ಪಡೆಯಲು ಅನುಮತಿ ನೀಡಿ ಆದೇಶ ಹೊರಡಿಸಲಾಗಿತ್ತು. ನಂತರ 2012–13 ನೇ ಶೈಕ್ಷಣಿಕ ಸಾಲಿಗೆ ಅನ್ವಯಿಸುವಂತೆ, ಸರ್ಕಾರವು ಕ್ಯಾರಿ ಓವರ್ ನಿಯಮಾವಳಿಗಳಿಗೆ ಬದಲಾವಣೆ ತಂದು, ಹಿಂದಿನ ವರ್ಷದ ಬಾಕಿ ಎಂಟು ಅಥವಾ ಎಂಟಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ಪಡೆಯಲು ಅನುಮತಿ ನೀಡಬಹುದಾಗಿದೆ ಎಂದು ಆದೇಶ ಹೊರಡಿಸಲಾಗಿತ್ತು.

ಸದರಿ ಎಂಟು ಕ್ಯಾರಿಓವರ್ ನಿಯಮಾವಳಿಗಳನ್ನು ಪ್ರಶ್ನಿಸಿ, ಪೂರ್ಣ ಕ್ಯಾರಿಓವರ್ ವಿಸ್ತರಿಸುವಂತೆ ಕೋರಿ, ಕೆಲವು ವಿದ್ಯಾರ್ಥಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:32330–32437/2012 (ಇಡಿಎನ್) ಹಾಗೂ ಇತರೆ ರಿಟ್ ಪಿಟಿಷನ್ ಗಳಲ್ಲಿ ದಾವೆ ಹೂಡಿದ್ದರು. ಈ ಕುರಿತಂತೆ ದಿನಾಂಕ:10–09–2012 ರಂದು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇದರ ಏಕ ಸದಸ್ಯ ಪೀಠವು 2013–14ನೇ ಸಾಲಿನಿಂದ ಕಡ್ಡಾಯವಾಗಿ ಸರ್ಕಾರದ ಆದೇಶ ದಿ:01–08–2009ರಲ್ಲಿ ಅಳವಡಿಸಿರುವ "Regulations and Guidelines for Diploma courses as per the curriculum-C-09/10" ರಂತೆ ಮುಂದಿನ ವರ್ಷದ ತರಗತಿಗೆ ಪ್ರವೇಶ ನೀಡುವಂತೆ ಆದೇಶಿಸಿರುತ್ತದೆ.

ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠದ ತೀರ್ಪಿನ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡದಲ್ಲಿ ದ್ವಿಸದಸ್ಯ ಪೀಠದ ಮುಂದೆ ಕೆಲವು ವಿದ್ಯಾರ್ಥಿಗಳು ರಿಟ್ ಅಪೀಲ್ ಸಂಖ್ಯೆ: 31203/2012ನ್ನು ದಾಖಲಿಸಿ, ಪೂರ್ಣ ಕ್ಯಾರಿ ಓವರ್ ಸೌಲಭ್ಯವನ್ನು ನೀಡುವಂತೆ ಮೇಲ್ಮನವಿ ಸಲ್ಲಿಸಿದ್ದರು. ಸದರಿ ಮೇಲ್ಮನವಿಯನ್ನು ವಿಚಾರಣೆಗೆ ಒಳಪಡಿಸಿದ, ದ್ವಿಸದಸ್ಯ ಪೀಠವು ದಿನಾಂಕ 6–12–2012 ರಲ್ಲಿ ತೀರ್ಪನ್ನು ನೀಡಿ, ದಿನಾಂಕ 10–09–2012 ರಲ್ಲಿ ಏಕ ಸದಸ್ಯ ಪೀಠ ನೀಡಿದ ತೀರ್ಪನ್ನು ಎತ್ತಿ ಹಿಡಿದು, 2013–14ನೇ ಸಾಲಿನಿಂದ ಕಡ್ಡಾಯವಾಗಿ ಸರ್ಕಾರದ ಆದೇಶ ದಿ:01–08–2009ರಲ್ಲಿ ಅಳವಡಿಸಿರುವ "Regulations and Guidelines for Diploma courses as per the curriculum-C-09/10" ರಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ವರ್ಷದ ತರಗತಿಗಳಿಗೆ ಪ್ರವೇಶ ನೀಡುವಂತೆ ತೀರ್ಪು ನೀಡಿದೆ.

ಮಾನ್ಯ ಉಚ್ಚ ನ್ಯಾಯಾಲಯಗಳ ಏಕಸದಸ್ಯ ಪೀಠ ಹಾಗು ದ್ವಿಸದಸ್ಯ ಪೀಠಗಳು ನೀಡಿರುವ ತೀರ್ಪಿನ ಆದೇಶಗಳ ಬಗ್ಗೆ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಈಗಾಗಲೇ ಪಡೆದಿದ್ದು, ಅಡ್ವೋಕೇಟ್ ಜನರಲ್‌ರವರು ಮಾನ್ಯ ಉಚ್ಚ ನ್ಯಾಯಾಲಯಗಳ ಏಕಸದಸ್ಯ ಪೀಠ ಹಾಗು ದ್ವಿಸದಸ್ಯ ಪೀಠಗಳು ನೀಡಿರುವ ತೀರ್ಪಿನ ಆದೇಶಗಳನ್ನು ಪಾಲಿಸಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ಸರ್ಕಾರದ ಆದೇಶ ದಿ:01–08–2009ರಲ್ಲಿ ಅಳವಡಿಸಿರುವ "Regulations and Guidelines" ನಲ್ಲಿ ತಿಳಿಸಿದಂತೆ ಹಿಂದಿನ ವರ್ಷದ ಬಾಕಿ ಒಟ್ಟು ವಿಷಯಗಳ ಪೈಕಿ ನಾಲ್ಕು ಅಥವಾ ನಾಲ್ಕಕ್ಕಿಂತ ಕಡಿಮೆ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಮಾತ್ರ ಮುಂದಿನ ತರಗತಿಗಳಿಗೆ ಪ್ರವೇಶ ನೀಡುವ ನಿಯಮಾವಳಿಗಳು ಊರ್ಜಿತವಾಗಿರುತ್ತದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಅದ್ದರಿಂದ ವಿದ್ಯಾರ್ಥಿಗಳು ಮಾನ್ಯ ನ್ಯಾಯಾಲಯದ ತೀರ್ಪುಗಳ ಅದೇಶ ಹಾಗು ನಿಯಮಾವಳಿಗಳನ್ನು ಶೈಕ್ಷಣಿಕ ದೃಷ್ಟಿಯಿಂದ ಅರ್ಥಮಾಡಿಕೊಂಡು, ಪರೀಕ್ಷೆಗಳಲ್ಲಿ ಹೆಚ್ಚಿನ ಅಧ್ಯಯನ ನಡೆಸಿ ಉತ್ತೀರ್ಣರಾಗಿ, ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

(ಆರ್.ವಿ.ದೇಶಪಾಂಡೆ)
**ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು**